ಆ) 1) ರಾಜ್ಯದ 10 ಜಿಲ್ಲ ಕೇಂದ್ರಗಳಲ್ಲಿ ಹೊಸದಾಗಿ ಜಿಲ್ಲಾ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ 2005–06ನೇ ಸಾಲಿನಲ್ಲಿ ಒಟ್ಟು ರೂ.284.75 ಲಕ್ಷವನ್ನು ಕಾಯ್ದಿರಿಸಲಾಗಿದೆ. ಅವರಿಂದ ಪ್ರಸ್ತಾವನೆ ಬಂದ ಕೂಡಲೇ ಪರಿಶೀಲಿಸಿ ಮುಂದಿನ ಸೂಕ್ತ ಕ್ರಮಕೈಗೊಳ್ಳಲಾಗುವುದು.

2) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವತಿಯಿಂದ 2005–06ನೇ ಸಾಲಿನಲ್ಲಿ ಕೊಡಗು ಜಿಲ್ಲೆಯನ್ನೊಳಗೊಂಡಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ.

i) ಪ್ರತಿ ಜಿಲ್ಲೆಗೆ ರೂ.3000.00 ಗಳ ವೆಚ್ಚದಲ್ಲಿ ಜಿಲ್ಲಾ ಮಟ್ಟದ ಅಖಿಲ ಕರ್ನಾಟಕ ಮಕ್ಕಳ ವಿಜ್ಞಾನ ಸಮಾವೇಶ 2005 ರ ಆಯೋಜನೆ.

ii) ಪ್ರತಿ ಜಿಲ್ಲೆಗೆ ರೂ.3000.00ಗಳ ವೆಚ್ಚದಲ್ಲಿ ಜಿಲ್ಲಾ ಮಟ್ಟದ ಅಖಿಲ ಕರ್ನಾಟಕ ಮಾದರಿ ನಿರ್ಮಾಣ ಸ್ಪರ್ಧೆ 2005ರ ಯೋಜನೆ.

iii) ಜಿಲ್ಲಾ ಮಟ್ಟದಲ್ಲಿ ಬಾಲವಿಜ್ಞಾನಿ, ಯುವ ವಿಜ್ಞಾನಿ, ವಿಜ್ಞಾನ ಪತ್ರಿಕೋದ್ಯಮಿ, ಪುರಸ್ಕಾರ ಹಾಗೂ ವಿಜ್ಞಾನ ಜನಪ್ರಿಯಗೊಳಿಸಲು ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಸಂಘ ಸಂಸ್ಥೆಗಳು ಮತ್ತು ವ್ಯಕ್ತಿಗಳಿಗೆ ಪುರಸ್ಕಾರ, ಈ ಯೋಜನೆಗೆ ಅಂದಾಜು ವೆಚ್ಚವನ್ನು ಇಷ್ಟರಲ್ಲಿಯೇ ನಿಗಧಿಪಡಿಸಲಾಗುವುದು.

iv) ಶಾಲಾ ಕಾಲೇಜುಗಳಲ್ಲಿ ವಿಜ್ಞಾನ ಜನಪ್ರಿಯಗೊಳಿಸುವ ಸಲುವಾಗಿ ವಿಜ್ಞಾನ ಸಂಘಗಳ ಸ್ಥಾಪನೆ, ಈ ಯೋಜನೆಗೆ ಅಂದಾಜು ವೆಚ್ಚವನ್ನು ಇಷ್ಟರಲ್ಲಿಯೇ ನಿಗಧಿ ಪಡಿಸಲಾಗುವುದು.

3535(3895) : ಶ್ರೀ ಬಸವರಾಜು ಹೆಚ್.ಡಿ. (ವಿರಾಜ್‌ಪೇಟೆ) – ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ಟೌನ್ ಪಂಚಾಯಿತಿ ಲೆಕ್ಕ ತಪಾಸಣಾ ವರದಿಯಲ್ಲಿ ಕಳೆದ 3 ವರ್ಷಗಳಿಂದ ದಾಖಲಾಗಿರುವ ಹಣದ ದುರುಪಯೋಗ ಮತ್ತು ಅವ್ಯವಹಾರಗಳು ಯಾವುವು;

ಆ) ಎಷ್ಟು ಹಣ ದುರ್ಬಳಕೆಯಾಗಿದೆ ;

ಇ) ಇದಕ್ಕೆ ಕಾರಣಕರ್ತರಾದವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು) ;

ಈ) ವಿರಾಜಪೇಟೆ ಟೌನ್ ಪಂಚಾಯತಿ ವತಿಯಿಂದ ನಿರ್ಮಾಣ ಗೊಳ್ಳಬೇಕಾಗಿರುವ ಖಾಸಗಿ ಬಸ್ ನಿಲ್ದಾಣ ಮತ್ತು ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ಸರ್ಕಾರ ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ; ಮತ್ತು ಎಷ್ಟು ಹಣ ವೆಚ್ಚ ಮಾಡಲಿದೆ; ವಿವರ ನೀಡುವುದು ;

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) –

ಅ)1. ಟೆಂಡರ್‌ಗಳನ್ನು ಕರೆಯದೆಕಾಮಗಾರಿಗಳನ್ನು ನಿರ್ವಹಿಸಿರುವುದು.

2. ಆಡಳಿತಾತ್ಮಕ ಮಂಜೂರಾತಿ ಪಡೆಯದೆ ಕಾಮಗಾರಿ ನಿರ್ವಹಣೆ ಮತ್ತು ಸಾಮಗ್ರಿಗಳನ್ನು ಖರೀದಿಸಿರುವುದು.

3. ಹುದ್ದೆಗಳು ಮಂಜೂರಾತಿಯಾಗದೇ ಸಿಬ್ಬಂದಿಗಳಿಗೆ ವೇತನ ಪಾವತಿಸಿರುವುದು ಮತ್ತು ಇತ್ಯಾದಿ.

ಆ) ಸುಮಾರು ರೂ.108.00 ಲಕ್ಷಗಳ ವೆಚ್ಚಕ್ಕೆ ಆಡಿಟ್ ತಪಾಸಣಾ ವರದಿಯಲ್ಲಿ ಆಕ್ಷೇಪಗೆ ವ್ಯಕ್ತಪಡಿಸಿರುತ್ತಾರೆ.

ಇ) ಈ ಬಗ್ಗೆ ತನಿಖೆ ನಡೆಸುವ ಸಲುವಾಗಿ ಪ್ರಕರಣವನ್ನು ಲೋಕಾಯುಕ್ತರವರಿಗೆ ವಹಿಸಲಾಗಿದೆ.

ಈ) ಈ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

3536 (3897) ಶ್ರೀ ಬಸವರಾಜು ಹೆಚ್.ಡಿ. (ವಿರಾಜ್‌ಪೇಟೆ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಯಾವ ಯಾವ ಹಂತದ ಅಧಿಕಾರಿಗಳು ಸರ್ಕಾರಿ ವಾಹನ ಪಡೆಯಲು (ಬಳಕೆ ಮಾಡಲು) ಅರ್ಹರಿರುತ್ತಾರೆ. ಹಾಗೂ ಅದರ ನಿಯಮಾವಳಿಗಳ (ಮಾರ್ಗಸೂಚಿ) ವಿವರ ನೀಡುವುದು;

ಆ) ಸರ್ಕಾರದ ನಿಯಮಾವಳಿಗಳಿಗೆ ಅರ್ಹರಲ್ಲದ ರಾಜ್ಯ ಸರ್ಕಾರದ ಕೆಲವು ಅಧಿಕಾರಿಗಳು ಸರ್ಕಾರಿ ವಾಹನ ಬಳಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;